2017 ಕ.ತೀ.ವ. 278

(ಕಲಬುರ್ಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತ

ಶಾಖಾ ವ್ಯವಸ್ಥಾಪಕರು, ಓರಿಯಂಟಲ್ ಇನ್‌ಶ್ಯೂರೆನ್ಸ್ ಕಂ.ಲಿ., ಬಿಜಾಪುರ ಮತ್ತು ಇನ್ನೊಬ್ಬರು –ವಿರುದ್ಧ– ಶ್ರೀಮತಿ ಕಾಶಿಬಾಯಿ ಮತ್ತು ಇತರರು*

ಮೋಟಾರು ವಾಹನಗಳ ಅಧಿನಿಯಮ, 1988

ಎಂವಿಸಿ ಸಂಖ್ಯೆ 535/2012 ಮೊಕದ್ದಮೆಯಲ್ಲಿ ಬಿಜಾಪುರದ ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣವು, ಕ್ಲೇಮು ಅರ್ಜಿಯನ್ನು ಭಾಗಶಃ ಪುರಸ್ಕರಿಸಿ, 3,29,500/– ರೂ.ಗಳ ಪರಿಹಾರವನ್ನು ವಾರ್ಷಿಕ ಶೇ.6ರ ಬಡ್ಡಿಯೊಂದಿಗೆ ನೀಡುವಂತೆ ಹೊರಡಿಸಿದ ದಿನಾಂಕ 19.02.2013ರ ತೀರ್ಪು ಮತ್ತು ಐತೀರ್ಪಿನ ವಿರುದ್ಧ ಮೋಟಾರು ವಾಹನಗಳ ಅಧಿನಿಯಮದ 173 (1)ನೇ ಪ್ರಕರಣದ ಅಡಿಯಲ್ಲಿ ಸಂಕೀರ್ಣ ಮೊದಲನೇ ಮೇಲ್ಮನವಿಯನ್ನು ಸಲ್ಲಿಸಲಾಗಿದೆ.

ವಿಮಾ ಕಂಪನಿಯು ಸಲ್ಲಿಸಿದ ಸದರಿ ಮೇಲ್ಮನವಿಯನ್ನು ನ್ಯಾಯಾಲಯವು ವಿಚಾರಣೆಗೆ ಎತ್ತಿಕೊಂಡು, ಪಕ್ಷಕಾರರ ಪರ ಅಹವಾಲುಗಳನ್ನು ಆಲಿಸಿ, ಹಲವಾರು ತೀರ್ಪುಗಳನ್ನು ಪರಿಗಣಿಸಿದೆ. ಅದರಂತೆ, ವಿಮಾ ಕಂಪನಿಯು ಕೋರಿರುವ ಹಾಗೆ ಸಾರ್ವಜನಿಕ ಸಾರಿಗೆಯ ವಾಹನಗಳ ಪ್ರಯಾಣಿಕರನ್ನು, ವಿಮಾ ಪಾಲಿಸಿಯಲ್ಲಿ ನಿರ್ದಿಷ್ಟಪಡಿಸಿದ ವ್ಯಕ್ತಿಗಳನ್ನು, ಖಾಸಗಿ ವಾಹನದ ಮಾಲೀಕ–ಚಾಲಕನನ್ನು ಮತ್ತು ಹೆಚ್ಚುವರಿ ವಿಮಾ ಕಂತನ್ನು ಪಾವತಿಸಿ ಹೆಚ್ಚುವರಿ ವಿಮಾ ರಕ್ಷಣೆ ಪಡೆದ ಖಾಸಗಿ ವಾಹನದ ಉಚಿತ

* ಸಂಕೀರ್ಣ ಮೊದಲ ಮೇಲ್ಮನವಿ ಸಂಖ್ಯೆ: 30987/2013 (ಎಂ.ವಿ), ದಿನಾಂಕ: 18ನೇ ಏಪ್ರಿಲ್ 2016.

ಪ್ರಯಾಣಿಕರನ್ನು ಹೊರತುಪಡಿಸಿ, ಉಳಿದ ಯಾರಿಗೂ ವಿಮಾ ರಕ್ಷಣೆ ದೊರೆಯುವುದಿಲ್ಲವೆಂಬುದನ್ನು ನ್ಯಾಯಾಲಯವು ಪುರಸ್ಕರಿಸಿದೆ.

ಮೋಟಾರು ವಾಹನಗಳ ತಿದ್ದುಪಡಿ ಅಧಿನಿಯಮ, 1994ರ ನಂತರ 147ನೇ ಪ್ರಕರಣಕ್ಕೆ ತಿದ್ದುಪಡಿಯಾಗಿದ್ದು, ಅದರ ಪ್ರಕಾರ ಶಾಸಕಾಂಗವು ಸರಕು ಸಾಗಣೆ ವಾಹನದಲ್ಲಿ ಸರಕುಗಳ ಮಾಲೀಕ ಅಥವಾ ಆತನ ಅಧಿಕೃತ ಪ್ರತಿನಿಧಿಗೆ ವಿಮಾರಕ್ಷಣೆ ನೀಡುವುದನ್ನು ಖಾತ್ರಿಪಡಿಸಿರುವುದನ್ನು ಮತ್ತು ಬಾಡಿಗೆ ಅಥವಾ ಪ್ರತಿಫಲ ನೀಡದೆ ಉಚಿತವಾಗಿ ಸಂಚರಿಸುವ ಪ್ರಯಾಣಿಕರನ್ನು ಅದರಿಂದ ಹೊರತುಪಡಿಸಿರುವುದನ್ನು ಸ್ಪಷ್ಟಪಡಿಸಿದೆ.

ಹಾಗಾಗಿ, ತೃತೀಯ ಪಕ್ಷಕಾರ ಎಂದರೆ, ಮಾಲೀಕ ಅಥವಾ ಚಾಲಕನಾಗಿದ್ದು, ಉಳಿದ ಹೆಚ್ಚುವರಿ ವಿಮಾ ಕಂತಿನ ಮೇಲೆ ವಿಮಾರಕ್ಷಣೆ ಪಡೆಯದೆ ಮತ್ತು ಖಾಸಗಿ ವಾಹನದಲ್ಲಿ ಉಚಿತವಾಗಿ ಪ್ರಯಾಣ ಮಾಡುವ ದ್ವಿಚಕ್ರವಾಹನದ ಹಿಂಬದಿ ಸವಾರನೂ ಒಳಗೊಂಡಂತೆ ಪ್ರಯಾಣಿಕರಿಗೆ ವಿಮಾ ರಕ್ಷಣೆ ನೀಡಲು ವಿಮಾಕರ್ತನಿಗೆ ಯಾವುದೇ ಬಾಧ್ಯತೆಯಿಲ್ಲವೆಂದು ನ್ಯಾಯಾಲಯವು ನಿರ್ಣಯಿಸಿದೆ.

***ಉಲ್ಲೇಖಿಸಲಾದ ಮೊಕದ್ದಮೆಗಳು:*** ***ಪ್ಯಾರಾಗಳಲ್ಲಿ***

1. *ಐಎಲ್ಆರ್ 2012 ಕೆಎಆರ್ 1841*
*ಬ್ರಾಂಚ್ ಮ್ಯಾನೇಜರ್, ದಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂ.ಲಿ –ವಿರುದ್ಧ– ಮಹಾದೇವ್ ಪಾಂಡುರಂಗ್ ಪಾಟೀಲ್ ಮತ್ತು ಇನ್ನೊಬ್ಬರು.* *(ಉಲ್ಲೇ) 4*

2. *ಎಂಎಫ್ಎ ಸಂ.2643/2010*
*(2010ರ ಜೂನ್, 9 ರಂದು ವಿಲೆಯಾಗಿದೆ).*
*ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂ. ಲಿ., –ವಿರುದ್ಧ– ಶ್ರೀ ಜಿ. ನಾಗರಾಜು* *(ಉಲ್ಲೇ) 5*

3. ಐಎಲ್‌ಆರ್ 2004 ಕೆಎಆರ್ 398
ರಾಮಚಂದ್ರ ಮತ್ತು ಇನ್ನೊಬ್ಬರು –ವಿರುದ್ಧ–
ಶಾಂತಾರಾಂ ಮತ್ತು ಇತರರು (ಉಲ್ಲೇ) 5

4. ಎಸಿಜೆ 2009–0–2020
ನಿಂಗಮ್ಮ –ವಿರುದ್ಧ– ಯುನೈಟೆಡ್ ಇಂಡಿಯಾ
ಇನ್‌ಶ್ಯೂರೆನ್ಸ್ ಕಂ.ಲಿ., (ಉಲ್ಲೇ) 7

5. (2004)5 ಎಸ್‌ಸಿಸಿ 385
ದೀಪಲ್ ಗಿರೀಶ್‌ಬಾಯಿ ಸೋನಿ –ವಿರುದ್ಧ–
ಯುನೈಟೆಡ್ ಇಂಡಿಯಾ ಇನ್‌ಶ್ಯೂರೆನ್ಸ್ ಕಂ.ಲಿ., (ಉಲ್ಲೇ) 7

6. 1987 ಎಸಿಜೆ 872
ಎಂ.ಕೆ. ಕುನ್ನಿಮೊಹಮ್ಮದ್ –ವಿರುದ್ಧ–
ಪಿ.ಎ. ಅಹಮದ್ ಕುಟ್ಟಿ (ಉಲ್ಲೇ) 8

7. (2003) 2 ಎಸ್‌ಸಿಸಿ 223
ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂ. ಲಿ., –ವಿರುದ್ಧ–
ಆಶಾರಾಣಿ ಮತ್ತು ಇತರರು (ಉಲ್ಲೇ) 14

8. (2006) 4 ಎಸ್‌ಸಿಸಿ 404
ಯುನೈಟೆಡ್ ಇಂಡಿಯಾ ಇನ್‌ಶ್ಯೂರೆನ್ಸ್ ಕಂ.ಲಿ.,
–ವಿರುದ್ಧ– ತಿಲಕ್ ಸಿಂಗ್ ಮತ್ತು ಇತರರು (ಉಲ್ಲೇ) 15

ಮೇಲ್ಮನವಿದಾರರ ಪರ : ಶ್ರೀ ಸುದರ್ಶನ್ ಎಂ. ನ್ಯಾಯವಾದಿ.
1 ರಿಂದ 3 ಎದುರುದಾರರ ಪರ : ಶ್ರೀ ಬಾಪುಗೌಡ ಸಿದ್ದಪ್ಪ, ನ್ಯಾಯವಾದಿ.

## ತೀರ್ಪು

**ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತ :**

ಈ ಮೇಲ್ಮನವಿಯನ್ನು, ಬಿಜಾಪುರದ ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣವು ಎಂವಿಸಿ ಸಂಖ್ಯೆ 535/2012 ರಲ್ಲಿ ಹೊರಡಿಸಿದ ತೀರ್ಪು ಮತ್ತು ಐತೀರ್ಪಿನ ವಿರುದ್ಧ ಸಲ್ಲಿಸಲಾಗಿದೆ.

2. ಸಂಕ್ಷಿಪ್ತ ಸಂಗತಿಗಳು ಈ ಮುಂದಿನಂತಿವೆ:

11.12.2006ರಂದು, ಮೃತ ಗುರುಲಿಂಗಪ್ಪನು ರಾಂಜೋಲ್ ಎಂಬ ಗ್ರಾಮದಿಂದ ಕೆಎ–09/ಎಂ–4033 ನೋಂದಣಿ ಸಂಖ್ಯೆಯ ಜೀಪಿನಲ್ಲಿ ತನ್ನ ಗೆಳೆಯನೊಂದಿಗೆ ಸಹ ಪ್ರಯಾಣಿಕನಾಗಿ ಪ್ರಯಾಣಿಸುತ್ತಿದ್ದಾಗ ಗುಲ್ಬರ್ಗಾ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ವ್ಯಾಪ್ತಿಯ ಶ್ರೀನಿವಾಸ ಸರಡಗಿ ಕ್ರಾಸ್ ಬಳಿ ಟ್ರಾಕ್ಟರ್‌ವೊಂದರಿಂದ ಅಪಘಾತ ಸಂಭವಿಸಿತು ಎಂಬುದು ಕಂಡು ಬಂದಿದ್ದು, ಕ್ಲೇಮುದಾರರ ದೃಢವಾದ ಹೇಳಿಕೆಯೇನೆಂದರೆ ಮೃತನು ಮೋಟಾರು ವಾಹನ ಅಪಘಾತದಿಂದ ಮಾರಣಾಂತಿಕ ಗಾಯಗಳಿಗೀಡಾಗಿ ನಂತರ ಗುಲ್ಬರ್ಗ ಜಿಲ್ಲಾ ಆಸ್ಪತ್ರೆಯಲ್ಲಿ ಮರಣ ಹೊಂದಿದನೆಂಬುದಾಗಿದೆ. ಈ ಸಂಗತಿಗಳನ್ನಾಧರಿಸಿ, ಮೃತನ ಪತ್ನಿ ಮತ್ತು ಮಕ್ಕಳಾದ ಕ್ಲೇಮುದಾರರು ತಮ್ಮ ಕ್ಲೇಮಿಗೆ ಬೆಂಬಲವಾಗಿ ಪಿಡಬ್ಲ್ಯೂ.1 ಸಾಕ್ಷ್ಯವನ್ನು ಮುಂದಿಟ್ಟು, ಪಿ1 ರಿಂದ ಪಿ7 ರವರೆಗಿನ ನಿಶಾನೆಗಳನ್ನು ಗುರುತು ಮಾಡಿ ಮೋಟಾರು ವಾಹನಗಳ ಅಧಿನಿಯಮ, 1988 (ಸಂಕ್ಷಿಪ್ತವಾಗಿ 'ಅಧಿನಿಯಮ')ರ ಅಡಿಯಲ್ಲಿ ಕ್ಲೇಮು ಅರ್ಜಿಯನ್ನು ಸಲ್ಲಿಸಿದರು. ಮೇಲ್ಮನವಿದಾರ – ವಿಮಾ ಕಂಪನಿಯು ಆರ್.ಡಬ್ಲ್ಯೂ.1 ಸಾಕ್ಷ್ಯವನ್ನು ಮುಂದಿಟ್ಟು, ಆರ್.1 ನಿಶಾನೆಯನ್ನು ಗುರುತು ಮಾಡಿ ಲಿಖಿತ ಹೇಳಿಕೆಯನ್ನು ಸಲ್ಲಿಸುವ ಮೂಲಕ ಮೊಕದ್ದಮೆಯನ್ನು ಪ್ರತಿವಾದಿಸಿತು.

3. ನ್ಯಾಯಾಧಿಕರಣವು ಮುಖ್ಯ ಸಾಕ್ಷ್ಯಾಧಾರವನ್ನು ಮೌಲ್ಯಮಾಪನ ಮಾಡಿದ ನಂತರ ಮಾಲೀಕನಿಗೆ ಪರಿಹಾರ ನೀಡುವ ಹೊಣೆಯನ್ನು ಮೇಲ್ಮನವಿದಾರ – ವಿಮಾ ಕಂಪನಿಯ ಮೇಲೆ ಹೊರಿಸಿ ಇಲ್ಲಿ ಪ್ರಶ್ನಿತವಾಗಿರುವ ತೀರ್ಪು ಮತ್ತು ಐತೀರ್ಪನ್ನು ಹೊರಡಿಸಿತು. ಇದರಿಂದ ಬಾಧಿತರಾದ ಮೇಲ್ಮನವಿದಾರ ವಿಮಾಕರ್ತರು ಈ ನ್ಯಾಯಾಲಯದ ಮುಂದೆ ಬಂದಿದ್ದಾರೆ.

4. ಮೇಲ್ಮನವಿದಾರ – ವಿಮಾ ಕಂಪನಿಯ ಪರ ಮಾನ್ಯ ನ್ಯಾಯವಾದಿಯ ವಾದ ಈ ಮುಂದಿನಂತಿದೆ: ಮೃತನು ಕೆಎ–09/ಎಂ–4033 ನೋಂದಣಿ ಸಂಖ್ಯೆಯ ಖಾಸಗಿ ವಾಹನದಲ್ಲಿ ಎಂದರೆ, ಜೀಪಿನಲ್ಲಿ ಸಹ ಪ್ರಯಾಣಿಕನಾಗಿ ಪ್ರಯಾಣಿಸುತ್ತಿದ್ದು, ವಾಹನದ ಮಾಲೀಕನು ಸಹ ಪ್ರಯಾಣಿಕರ/ವಾಹನದಲ್ಲಿದ್ದವರ ಅಪಾಯಕ್ಕೆ ಪರಿಹಾರವನ್ನು ನೀಡಲು ಯಾವುದೇ ಹೆಚ್ಚುವರಿ ವಿಮಾ ಕಂತನ್ನು ಸಂದಾಯ ಮಾಡಿಲ್ಲ. ನಿಶಾನೆ ಆರ್.1 ವಿಮಾ ಪಾಲಿಸಿಯು ವಿಮೆಯನ್ನು ಕೇವಲ ಮಾಲೀಕ/ಚಾಲಕ ಒಳಗೊಂಡಂತೆ ತೃತೀಯ ಪಕ್ಷಕಾರರಿಗೆ ಮಾತ್ರ ಮಾಡಲಾಗಿದೆಯೇ ಹೊರತು, ಖಾಸಗಿ ವಾಹನದಲ್ಲಿ ಪ್ರಯಾಣಿಸುತ್ತಿದ್ದ ಸಹ ಪ್ರಯಾಣಿಕ/ವಾಹನದಲ್ಲಿದ್ದವರಿಗಲ್ಲವೆಂಬುದನ್ನು ಬಹಿರಂಗಪಡಿಸುತ್ತದೆ. ಮಾಲೀಕನಿಂದ ಹೆಚ್ಚುವರಿ ಕಂತಾಗಿ 100/– ರೂ.ಗಳನ್ನು ವಸೂಲಿ ಮಾಡಿದ್ದು, ವಿಮಾ ಪಾಲಿಸಿಯು ಸಹ ಪ್ರಯಾಣಿಕ/ವಾಹನದಲ್ಲಿದ್ದವರಿಗೆ ವಿಮಾ ರಕ್ಷಣೆ ಒದಗಿಸಿದೆಯೆಂದು ನ್ಯಾಯಾಧಿಕರಣವು ತಪ್ಪಾಗಿ ಅರ್ಥೈಸಿಕೊಂಡು ನಿಶಾನೆ ಆರ್.1 ವಿಮಾ ಪಾಲಿಸಿಯ ನಿಬಂಧನೆ ಮತ್ತು ಷರತ್ತುಗಳಿಗೆ ವಿರುದ್ಧವಾಗಿ ವಿಮಾಕರ್ತನ ಮೇಲೆ ಹೊಣೆಯನ್ನು ಹೊರಿಸಿದೆ. ಮಾನ್ಯ ನ್ಯಾಯವಾದಿಯು, ಖಾಸಗಿ ವಾಹನದ ಸಹ ಪ್ರಯಾಣಿಕರು/ಒಳಗಿದ್ದವರು/ಒಳಗೆ ಮುಫತ್ತಾಗಿ ಸಾಗುತ್ತಿದ್ದ ಪ್ರಯಾಣಿಕರು ತೃತೀಯ ಪಕ್ಷಕಾರರೆಂದು ಅರ್ಥೈಸಲಾಗದೆಂದು ವಾದಿಸಿದ್ದಾರೆ. ಮಾನ್ಯ ನ್ಯಾಯವಾದಿಯು ತಮ್ಮ ವಾದಕ್ಕೆ ಬೆಂಬಲವಾಗಿ ***ಬ್ರಾಂಚ್ ಮ್ಯಾನೇಜರ್, ದಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂ.ಲಿ –ವಿರುದ್ಧ– ಮಹಾದೇವ್ ಪಾಂಡುರಂಗ್ ಪಾಟೀಲ್ ಮತ್ತು ಇನ್ನೊಬ್ಬರು*** [1],

1. ಐಎಲ್ಆರ್ 2012 ಕೆಎಆರ್ 1841

ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ನೀಡಿರುವ ವಿಭಾಗೀಯ ಪೀಠದ ತೀರ್ಪನ್ನು ಆಧಾರವಾಗಿಟ್ಟುಕೊಂಡಿದ್ದಾರೆ.

5. ಅದಕ್ಕೆ ವ್ಯತಿರಿಕ್ತವಾಗಿ, ನ್ಯಾಯಾಧಿಕರಣವು ಹೊರಡಿಸಿದ ತೀರ್ಪು ಮತ್ತು ಐತೀರ್ಪನ್ನು ಸಮರ್ಥಿಸಿಕೊಂಡ ಕ್ಲೇಮುದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಯು, ಹೆಚ್ಚುವರಿಯಾಗಿ ವೈಯಕ್ತಿಕ ಅಪಘಾತ (ಪಿ.ಎ.)ದ ಕಡೆಗೆ ಮೇಲ್ಮನವಿದಾರರು 100/- ರೂ.ಗಳನ್ನು ವಸೂಲಿ ಮಾಡಿದ್ದಾನೆಂದು ವಾದಿಸಿದ್ದಾರೆ. ನಿಶಾನೆ ಆರ್.1 ವಿಮಾ ಪಾಲಿಸಿಯು ಆಪರಾಧಿಕ ವಾಹನದಲ್ಲಿ ಪ್ರಯಾಣಿಸುತ್ತಿದ್ದ ತೃತೀಯ ಪಕ್ಷಕಾರರಿಗೆ ವಿಮೆಯನ್ನು ಒಳಗೊಂಡಿದೆ. ವಿಮಾ ಕರ್ತರು, ಮೃತನು ಖಾಸಗಿ ವಾಹನದಲ್ಲಿ ಮುಫತ್ತಾಗಿ ಸಾಗುತ್ತಿದ್ದ ಪ್ರಯಾಣಿಕನಾಗಿದ್ದು, ಆತನಿಗೆ ವಿಮಾ ಪಾಲಿಸಿಯ ರಕ್ಷಣೆ ದೊರೆಯುವುದಿಲ್ಲವೆಂಬ ರಕ್ಷಣಾ ನಿಲುವನ್ನು ತಳೆದು, ಪರಿಹಾರ ನೀಡುವ ಮಾಲೀಕನ ಹೊಣೆಗಾರಿಕೆಯನ್ನು ತಪ್ಪಿಸಲಾಗದು ಎಂದು ವಾದಿಸಿದ್ದಾರೆ. ಅವರ ಪ್ರಕಾರ, ಪಾಲಿಸಿಯ ಅಡಿಯಲ್ಲಿ ವಿಮಾ ರಕ್ಷಣೆಗೆ ಯಾವ ಭೇದ ಭಾವವೂ ಇಲ್ಲದೆ ಸಹ ಪ್ರಯಾಣಿಕರು/ಮುಫತ್ತಾಗಿ ಸಾಗುತ್ತಿದ್ದ ಪ್ರಯಾಣಿಕರೂ ಕೂಡ ಅಧಿನಿಯಮದ 163-ಎ ಪ್ರಕರಣದ ಅಡಿಯಲ್ಲಿ ನಷ್ಟ ಪರಿಹಾರಕ್ಕೆ ಹಕ್ಕುಳ್ಳವರಾಗಿರುತ್ತಾರೆ ಎಂಬುದಾಗಿದೆ. ಮಾನ್ಯ ನ್ಯಾಯವಾದಿಯು ಮುಂದುವರಿದು, ಅಧಿನಿಯಮದ 163-ಎ ಪ್ರಕರಣವು ತೃತೀಯ ಪಕ್ಷಕಾರರ ಹಿತಾಸಕ್ತಿಯನ್ನು ರಕ್ಷಿಸಲು ಅಧಿನಿಯಮಿತವಾದ ಒಂದು ವಿಶೇಷ ಉಪಬಂಧವಾಗಿದ್ದು, ಅದು ನಿರ್ದೋಷಿ ಹೊಣೆಗಾರಿಕೆಯ ಮೂಲತತ್ವದ ಸಾರವನ್ನು ಒಳಗೊಂಡ ಅಧಿನಿಯಮದ 166ನೇ ಪ್ರಕರಣದ ಅಡಿಯಲ್ಲಿ ನಡೆದ ದೀರ್ಘ ಅಧಿವಿಚಾರಣೆಯಿಂದ ರೂಪುಗೊಂಡ ಮಾರ್ಗವಾಗಿದೆಯೆಂದು ವಾದಿಸಿದ್ದಾರೆ. ಖಾಸಗಿ ವಾಹನದ ಸಹ-ಪ್ರಯಾಣಿಕರು/ ಒಳಗಿದ್ದವರು/ ಮುಫತ್ತಾಗಿ ಸಾಗುತ್ತಿದ್ದ ಪ್ರಯಾಣಿಕರನ್ನು ತೃತೀಯ ಪಕ್ಷಕಾರರೆಂದು ಅರ್ಥೈಸದಿದ್ದರೆ ಅಧಿನಿಯಮದ 163-ಎ ಪ್ರಕರಣವನ್ನು ಅಧಿನಿಯಮಿಸಿದ ಘೋಷಿತ ಉದ್ದೇಶವೇ ವಿಫಲವಾಗುತ್ತದೆ ಮತ್ತು ಅಂಥ ಪ್ರಯಾಣಿಕರಿಗೆ ವಿಮಾ ರಕ್ಷಣೆ ದೊರೆಯಲು ಹೆಚ್ಚುವರಿ ವಿಮಾಕಂತು ಸಂದಾಯ ಮಾಡಿದ ಹೊರತು ಅಂಥ ಹೊಣೆಗಾರಿಕೆಯನ್ನು ವಿಮಾಕರ್ತನ ಮೇಲೆ ಹೊರಿಸಲಾಗದು. ಮೃತನ ವಿಧವಾ

ಪತ್ನಿ ಮತ್ತು ಮಕ್ಕಳು ಉದ್ದೇಶಪೂರ್ವಕವಾಗಿಯೇ ಅಧಿನಿಯಮದ 163–ಎ ಪ್ರಕರಣದ ಅಡಿಯಲ್ಲಿ ಕ್ಲೇಮು ಅರ್ಜಿಯನ್ನು ಸಲ್ಲಿಸಿದ್ದು, ಅದರಡಿಯಲ್ಲಿ ಸಾವು ಅಥವಾ ಅಂಗವಿಕಲತೆಯು ಮಾಲೀಕನ ಕಡೆಯಿಂದ ಅಥವಾ ಯಾರೇ ಇತರ ವ್ಯಕ್ತಿಯ ಕಡೆಯಿಂದ ಯಾವುದೇ ನಿರ್ಲಕ್ಷ್ಯದ ಅಥವಾ ತಪ್ಪಿನ ಕಾರಣದಿಂದಾಗಿದೆ ಎಂದು ಕ್ಲೇಮುದಾರರು ವಾದಿಸುವ ಅಥವಾ ಸಮರ್ಥಿಸುವ ಅಗತ್ಯವಿಲ್ಲವೆಂದು ಮುಂದುವರಿದು ವಾದಿಸಲಾಗಿದೆ. ಅವರ ವಾದಕ್ಕೆ ಬೆಂಬಲವಾಗಿ, ಮಾನ್ಯ ನ್ಯಾಯವಾದಿಯು ಈ ನ್ಯಾಯಾಲಯದ ಈ ಕೆಳಕಂಡ ತೀರ್ಪುಗಳನ್ನು ಆಧಾರವಾಗಿಟ್ಟುಕೊಂಡಿದ್ದಾರೆ:

1. ***ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂ. ಲಿ., –ವಿರುದ್ಧ– ಶ್ರೀ ಜಿ. ನಾಗರಾಜು*** [2].

2. ***ರಾಮಚಂದ್ರ ಮತ್ತು ಇನ್ನೊಬ್ಬರು –ವಿರುದ್ಧ– ಶಾಂತಾರಾಂ ಮತ್ತು ಇತರರು*** [3].

6. ಪಕ್ಷಕಾರರ ವಾದ – ಪ್ರತಿವಾದಗಳನ್ನು ಆಲಿಸಲಾಗಿದೆ ಮತ್ತು ದಾಖಲೆಯಲ್ಲಿರುವ ಸಾಕ್ಷ್ಯಾಧಾರವನ್ನು ಪರಿಶೀಲಿಸಲಾಗಿದೆ.

7. ಅಧಿನಿಯಮದ 163–ಎ ಪ್ರಕರಣದ ಅಡಿಯಲ್ಲಿ ಕ್ಲೇಮನ್ನು ಸಲ್ಲಿಸಲಾಗಿದೆ ಎಂಬುದು ನಿರ್ವಿವಾದವಾದ ಸಂಗತಿಯಾಗಿದೆ. ಮೃತನು ಅಪಘಾತದ ಬಲಿಪಶು ಎಂಬುದು ಕ್ಲೇಮುದಾರರ ವಾದವಾಗಿದೆ. ತದನಂತರ, ವಿಧವೆಯಾದ ಪತ್ನಿ ಮತ್ತು ಮಕ್ಕಳು ಮೃತನ ಕಾನೂನು ವಾರಸುದಾರರಾಗಿದ್ದು, ಅವರು ಆ ಸಂಬಂಧ ನಷ್ಟ ಪರಿಹಾರವನ್ನು ಕ್ಲೇಮು ಮಾಡಲು ಹಕ್ಕುಳ್ಳವರಾಗಿದ್ದಾರೆ. ***ನಿಂಗಮ್ಮ –ವಿರುದ್ಧ– ಯುನೈಟೆಡ್ ಇಂಡಿಯಾ ಇನ್‌ಶ್ಯೂರೆನ್ಸ್ ಕಂ.ಲಿ.,*** [4], ಮೊಕದ್ದಮೆಯಲ್ಲಿ ಮಾನ್ಯ

2. ಎಂಎಫ್ಎ ಸಂ.2643/2010) (2010ರ ಜೂನ್, 9 ರಂದು ವಿಲೆಯಾಗಿದೆ)
3. ಐಎಲ್ಆರ್ 2004 ಕೆಎಆರ್ 398
4. ಎಸಿಜೆ 2009–0–2020

ಸರ್ವೋಚ್ಚ ನ್ಯಾಯಾಲಯವು ಅಧಿನಿಯಮದ 163–ಎ ಪ್ರಕರಣದ ಮೇರೆಗಿನ ವಿಷಯವನ್ನು ಪರ್ಯಾಲೋಚಿಸುವಾಗ ***ದೀಪಲ್ ಗಿರೀಶ್‌ಬಾಯಿ ಸೋನಿ –ವಿರುದ್ಧ– ಯುನೈಟೆಡ್ ಇಂಡಿಯಾ ಇನ್‌ಶ್ಯೂರೆನ್ಸ್ ಕಂ.ಲಿ.,*** [5], ಮೊಕದ್ದಮೆಯಲ್ಲಿನ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಪರಿಗಣಿಸಿದೆ. (ಮೇಲೆ ತಿಳಿಸಿದ) ***ದೀಪಲ್ ಗಿರೀಶ್‌ಬಾಯಿ ಸೋನಿ*** ಮೊಕದ್ದಮೆಯ ತೀರ್ಪಿನ ಪ್ಯಾರ ಸಂ.42ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮೂರನೇ ಪಕ್ಷಕಾರನೆಂಬುದಾಗಿ ಅರ್ಥೈಸಿಕೊಳ್ಳಬೇಕಾದ 'ಯಾವನೇ ವ್ಯಕ್ತಿ' ಯೆಂದು ಯಾರನ್ನು ಪರಿಗಣಿಸಬಹುದು ಎಂಬ ಬಗ್ಗೆ ವಿವರವಾಗಿ ಚರ್ಚಿಸಿದ್ದು, ಅದು ಈ ಕೆಳಕಂಡಂತಿದೆ:

> *"**42.** ಹಾಗಾಗಿ, ಕೇವಲ ಬಾಧಿತನ ವಯಸ್ಸನ್ನು ಮತ್ತು ಆತನ ಆದಾಯವನ್ನು ಮಾತ್ರವೇ ಪರಿಗಣನೆಗೆ ತೆಗೆದುಕೊಳ್ಳದೆ ಅದಕ್ಕೆ ಸಂಬಂಧಿಸಿದ ಇತರ ಸೂಕ್ತ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು, ಅಧಿನಿಯಮದಲ್ಲಿ, ಸೇರಿಸಲಾಗಿರುವ ಎರಡನೇ ಅನುಸೂಚಿಯೊಂದಿಗೆ ಓದಿಕೊಂಡಂತೆ ಅಧಿನಿಯಮದ163–ಎ ಪ್ರಕರಣದ ನಿಬಂಧನೆಗಳಿಗನುಸಾರ ಒಂದು ರೂಪಿತವಾದ ಸೂತ್ರದ ಮೇಲೆ ನಷ್ಟ ಪರಿಹಾರವನ್ನು ಸಂದಾಯ ಮಾಡಬೇಕೆಂಬುದನ್ನು ಗಮನದಲ್ಲಿಟ್ಟುಕೊಂಡು ವಾರ್ಷಿಕ ಆದಾಯ 40,000/– ರೂ.ಗಳಿಗಿಂತ ಹೆಚ್ಚಿಲ್ಲದ ಜನರಿಗೆ ತಕ್ಷಣದ ಪರಿಹಾರವನ್ನು ನೀಡುವುದಕ್ಕಾಗಿ 163–ಎ ಪ್ರಕರಣವನ್ನು ಅಧಿನಿಯಮಿಸಲಾಗಿದೆ. ಆದ್ದರಿಂದ ಅದರಡಿಯಲ್ಲಿ ಮಾಡಿದ ಐತೀರ್ಪು, ಅಧಿನಿಯಮದಲ್ಲಿರುವ ಎರಡನೇ ಅನುಸೂಚಿಯ ವಿವಿಧ ಕಲಮುಗಳಲ್ಲಿ ಕಂಡು ಬರುವಂತೆ ಕ್ಲೇಮಿನ ಸಂಪೂರ್ಣ ಮತ್ತು ಅಂತಿಮ*

5. (2004)5 ಎಸ್‌ಸಿಸಿ 385

*ಇತ್ಯರ್ಥವಾಗಿರತಕ್ಕದ್ದು. ಅದು ಮಧ್ಯಂತರ ಸ್ವರೂಪದ್ದಾಗಿರುವುದಿಲ್ಲ. ಮಾರಣಾಂತಿಕ ಅಪಘಾತಗಳ ಬಗ್ಗೆ ವ್ಯವಹರಿಸುವ 1ನೇ ಕಲಮಿಗೆ ಅನುಬಂಧಿಸಿದ ಟಿಪ್ಪಣಿಯು, ಮೃತನು ಬದುಕಿದ್ದಿದ್ದರೆ ಆತನ ನಿರ್ವಹಣೆಗಾಗಿ ಭರಿಸಬಹುದಾಗಿದ್ದ ವೆಚ್ಚಗಳನ್ನು ಪರಿಗಣನೆಗೆ ತೆಗೆದುಕೊಂಡು ಆ ಮಟ್ಟಕ್ಕೆ ಪರಿಹಾರದ ಒಟ್ಟು ಮೊತ್ತದಿಂದ ಅದರ ಮೂರನೇ ಒಂದರಷ್ಟನ್ನು ಇಳಿಸಬೇಕೆಂಬ ವಸ್ತುಸ್ಥಿತಿಯನ್ನು ಸುಸ್ಪಷ್ಟಗೊಳಿಸುತ್ತದೆ. ಇದು, ಅದರ 2 ರಿಂದ 6ರ ವರೆಗಿನ ಕಲಮುಗಳಲ್ಲಿ ಒಳಗೊಂಡಿರುವ ಇತರ ಪರಿಹಾರ ಶೀರ್ಷಿಕೆಗಳೊಂದಿಗೆ ಸೇರಿ, ಅಪಘಾತವು ಮೋಟಾರು ವಾಹನದ ಚಾಲಕನ ಕಡೆಯ ನಿರ್ಲಕ್ಷ್ಯದಿಂದಾಗಿದೆ ಅಥವಾ ಮೋಟಾರು ವಾಹನದ ಬಳಕೆಯಿಂದ ಯಾವುದೇ ಇತರ ತಪ್ಪು ಸಂಭವಿಸಿದೆ ಎಂಬುದನ್ನು ರುಜುವಾತುಪಡಿಸುವುದಕ್ಕಾಗಿ ಯಾವುದೇ ದೀರ್ಘ ವ್ಯಾಜ್ಯದೊಂದಿಗೆ ಸೆಣಸಾಡದೆ ಪರಿಹಾರದ ಮೊತ್ತವನ್ನು ಕೋರುವ ಬಾಧಿತರ ವರ್ಗಕ್ಕೆ ಸೂಕ್ತ ಪರಿಹಾರವನ್ನು ನೀಡುವ ಉದ್ದೇಶಕ್ಕಾಗಿ ಸಂಸತ್ತು ಒಂದು ವ್ಯಾಪಕ ಯೋಜನೆಯನ್ನು ರೂಪಿಸಲು ಉದ್ದೇಶಿಸಿದೆ ಎಂಬ ಯಾವುದೇ ಬಗೆಯ ಸಂದೇಹವನ್ನು ಉಳಿಸುವುದಿಲ್ಲ, ಅಲ್ಲದೆ ಈ ನ್ಯಾಯಾಲಯವು ಓರಿಯೆಂಟಲ್ ಇನ್‌ಶ್ಯೂರೆನ್ಸ್ ಕಂ.ಲಿ –ವಿರುದ್ಧ– ಮೀನಾ ವಾರಿಯಾಲ್ (2007) 5 ಎಸ್‌ಸಿಸಿ 428, ತೀರ್ಪಿನ 428ನೇ ಪುಟದಲ್ಲಿ ಇದನ್ನು ಗಮನಿಸಿದೆ: "18. ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂ. ಲಿ., –ವಿರುದ್ಧ– ಆಶಾರಾಣಿ ಮೊಕದ್ದಮೆಯಲ್ಲಿ ಈ ನ್ಯಾಯಾಲಯಕ್ಕೆ ಅಧಿನಿಯಮದ 147ನೇ ಪ್ರಕರಣದಲ್ಲಿ ಬರುವ "ಯಾರೇ ವ್ಯಕ್ತಿ" ಪದಾವಳಿಯ ವ್ಯಾಪ್ತಿಯನ್ನು*

> *ಪರ್ಯಾಲೋಚಿಸುವ ಅವಕಾಶ ಒದಗಿ ಬಂದಿತ್ತು. ಈ ನ್ಯಾಯಾಲಯದ ನಿರ್ಣಯ ಇಂತಿದೆ: (ಎಸ್‌ಸಿಸಿ ಪು.235, ಪ್ಯಾರಾ 26)" . . . . . . . . . "ಯಾರೇ ವ್ಯಕ್ತಿ" ಎಂಬ ಪದಗಳ ಅರ್ಥವು ಅವುಗಳನ್ನು ಯಾವ ಸಂದರ್ಭದಲ್ಲಿ ಬಳಕೆ ಮಾಡಲಾಗುತ್ತದೆಯೋ ಅದನ್ನು ಗಮನದಲ್ಲಿಟ್ಟುಕೊಂಡು 'ಒಬ್ಬ ತೃತೀಯ ಪಕ್ಷಕಾರ' ಎಂದು ಹೇಳಲೇಬೇಕಾಗುತ್ತದೆ'. 1988ರ ಅಧಿನಿಯಮವನ್ನು ದೃಷ್ಟಿಯಲ್ಲಿಟ್ಟುಕೊಂಡರೆ, ಅದರ ಉಪಬಂಧಗಳು ಸರಕು ಸಾಗಣೆ ವಾಹನದಲ್ಲಿ ಸಂಚರಿಸುವ ಯಾವುದೇ ಪ್ರಯಾಣಿಕನಿಗೆ ಸಂಬಂಧಿಸಿದಂತೆ ತನ್ನ ವಾಹನದಲ್ಲಿ ವಿಮೆ ಮಾಡಿಸುವ ಯಾವುದೇ ಶಾಸನಾತ್ಮಕ ಹೊಣೆಗಾರಿಕೆಯನ್ನು ಮಾಲೀಕನ ಮೇಲೆ ಹೊರಿಸದಿರುವುದರಿಂದ ವಿಮಾಕರ್ತರು ಅದಕ್ಕೆ ಹೊಣೆಗಾರರಾಗುವುದಿಲ್ಲ ಎಂಬುದು ನಮ್ಮ ಅಭಿಪ್ರಾಯವಾಗಿದೆ.*
>
> *ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, "ಯಾವುದೇ ವ್ಯಕ್ತಿ" ಎಂಬ ಮೇಲ್ನೋಟಕ್ಕೆ ಕಂಡುಬರುವ ವ್ಯಾಪಕ ಪದಗಳು ಅವು ಬರುವ ಸಂದರ್ಭಗಳಿಂದ ಅರ್ಹತೆ ಪಡೆಯುತ್ತವೆಂದು ಮತ್ತು "ಯಾರೇ ವ್ಯಕ್ತಿ" ಎಂಬುದನ್ನು ತೃತೀಯ ಪಕ್ಷಕಾರನೆಂಬುದಾಗಿ ಅರ್ಥ ಮಾಡಿಕೊಳ್ಳಬೇಕೆಂದು ಈ ನ್ಯಾಯಾಲಯವು ಸ್ಪಷ್ಟವಾಗಿ ನಿರ್ಣಯಿಸಿದೆ."*

8. ಪ್ರಸ್ತುತ ಮೊಕದ್ದಮೆಯಲ್ಲಿ ಅಧಿನಿಯಮದ 163–ಎ ಪ್ರಕರಣದ ಅಡಿಯಲ್ಲಿನ ವ್ಯವಹರಣೆಗಳಿಗೆ ಅಧಿನಿಯಮದ 147ನೇ ಪ್ರಕರಣವು ಅನ್ವಯವಾಗಬಹುದೇ ಎಂಬುದು ಚರ್ಚಾಸ್ಪದ ಪ್ರಶ್ನೆಯಾಗಿದೆ. ಅಧಿನಿಯಮದ ಅಧ್ಯಾಯ–XI ತೃತೀಯ ಪಕ್ಷಕಾರನ ಅಪಾಯಗಳ ವಿರುದ್ಧ ಮಾಡುವ ಮೋಟಾರು

ವಾಹನಗಳ ವಿಮೆ ಬಗ್ಗೆ ವ್ಯವಹರಿಸುತ್ತದೆ. ಅಧಿನಿಯುಮದ 147 ಮತ್ತು 163–ಎ ಎರಡೂ ಪ್ರಕರಣಗಳು ಅಧಿನಿಯಮದ ಅಧ್ಯಾಯ–XIರ ಅಡಿಯಲ್ಲಿಯೇ ಬರುತ್ತವೆ. ಅಧಿನಿಯಮದ 163–ಎ ಪ್ರಕರಣವನ್ನು ಅಧಿನಿಯಮ ಸಂಖ್ಯೆ 1994ರ 54 ಅಧಿನಿಯಮದ ಮೂಲಕ ಸೇರ್ಪಡೆಗೊಳಿಸಲಾಗಿದ್ದು, ಅದು 14.11.1994ರಿಂದ ಜಾರಿಗೆ ಬಂದಿದೆ ಎಂಬುದು ತಿಳಿದಿರುವ ಸಂಗತಿಯೇ ಆಗಿದೆ. 1994ರ 54ನೇ ತಿದ್ದುಪಡಿ ಅಧಿನಿಯಮದ ಆಕ್ಷೇಪಣೆಗಳು ಮತ್ತು ಕಾರಣಗಳ ಹೇಳಿಕೆಯು ಭಾರತ ಸರ್ಕಾರದ ಗೆಜೆಟ್–II, ಸೆಕ್ಷನ್ 1, ಸಂ.71 ದಿನಾಂಕ 12.9.1994ರ ರಾಜಪತ್ರದಲ್ಲಿ ಪ್ರಕಟವಾಗಿದೆ. ಈ ತಿದ್ದುಪಡಿಗಳನ್ನು ***ಎಂ.ಕೆ. ಕುನ್ನಿಮೊಹಮ್ಮದ್ –ವಿರುದ್ಧ– ಪಿ.ಎ. ಅಹಮದ್ ಕುಟ್ಟಿ***[6], ಮೊಕದ್ದಮೆಯಲ್ಲಿನ ಸರ್ವೋಚ್ಚ ನ್ಯಾಯಾಲಯದ ಶಿಫಾರಸುಗಳನ್ನಾಧರಿಸಿ ಮಾಡಲಾಗಿದೆ. ಅಧಿನಿಯಮ ಸಂ.1994ರ 54ನೇ ಅಧಿನಿಯಮದ ಮೂಲಕ 'ಯಾರೇ ವ್ಯಕ್ತಿಗೆ ಗಾಯ' ಎಂದು ಇದ್ದ ಪದಗಳ ಬದಲಿಗೆ 'ವಾಹನದಲ್ಲಿ ಸಾಗಿಸುತ್ತಿದ್ದ ಸರಕುಗಳ ಮಾಲೀಕ ಅಥವಾ ಆತನ ಅಧಿಕೃತ ಪ್ರತಿನಿಧಿಯೂ ಒಳಗೊಂಡಂತೆ ಯಾರೇ ವ್ಯಕ್ತಿಗೆ ಗಾಯ' ಎಂಬ ಪದಗಳನ್ನು ಪ್ರತ್ಯಾಯೋಜಿಸಿ 147(1)(ಬಿ)(i) ಪ್ರಕರಣವನ್ನು ತಿದ್ದುಪಡಿ ಮಾಡಲಾಗಿದೆ ಎಂಬುದನ್ನು ಗಮನಿಸುವುದೂ ಕೂಡ ಇಲ್ಲಿ ಸಮಂಜಸವಾಗುತ್ತದೆ.

9. ಅಧಿನಿಯಮದ 163–ಎ ಪ್ರಕರಣವು ಈ ಕೆಳಕಂಡಂತಿದೆ:

> "**163ಎ. ರೂಪಿಸಲಾದ ಸೂತ್ರದ ಆಧಾರದ ಮೇಲೆ ನಷ್ಟ ಪರಿಹಾರವನ್ನು ಸಂದಾಯ ಮಾಡುವ ಬಗ್ಗೆ ವಿಶೇಷ ಉಪಬಂಧಗಳು**:– (1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಕಾನೂನಿನ ಬಲವುಳ್ಳ ಲಿಖಿತದಲ್ಲಿ

6. 1987 ಎಸಿಜೆ 872

ಏನೇ ಇದ್ದರೂ, ಅಧಿಕೃತ ವಿಮಾಕರ್ತನ ಮೋಟಾರು ವಾಹನದ ಒಡೆಯನು, ಮೋಟಾರು ವಾಹನವನ್ನು ಬಳಸಿದ್ದರಿಂದಾಗಿ ಉಂಟಾದ ಅಪಘಾತದ ಕಾರಣದಿಂದ ಮರಣ ಅಥವಾ ಖಾಯಂ ಅಸಮರ್ಥತೆ ಉಂಟಾದ ಸಂದರ್ಭದಲ್ಲಿ ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ನಷ್ಟ ಪರಿಹಾರವನ್ನು ಕಾನೂನುಸಮ್ಮತ ಉತ್ತರಾಧಿಕಾರಿಗಳಿಗೆ ಅಥವಾ ಸಂದರ್ಭಾನುಸಾರ ಅಪಘಾತಕ್ಕೊಳಗಾದವನಿಗೆ ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು."

10. ಅಧಿನಿಯಮದ 147(1)ನೇ ಪ್ರಕರಣವು ಈ ಕೆಳಕಂಡಂತಿದೆ:

"**147. ವಿಮಾ ಪಾಲಿಸಿಗಳ ಅಗತ್ಯತೆಗಳು ಮತ್ತು ಹೊಣೆಗಾರಿಕೆಯ ಪರಿಮಿತಿಗಳು**:– (1) ಈ ಅಧ್ಯಾಯದ ಅಗತ್ಯತೆಗಳನ್ನು ಪಾಲಿಸಲು ವಿಮಾ ಪಾಲಿಸಿಯು, –

(ಎ) ಅಧಿಕೃತ ವಿಮೆಗಾರನಾದ ಒಬ್ಬ ವ್ಯಕ್ತಿಯಿಂದ ನೀಡಲಾದ; ಮತ್ತು

(ಬಿ) (2)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗಗಳ ಬಗ್ಗೆ, –

(i) ಸಾರ್ವಜನಿಕ ಸ್ಥಳದಲ್ಲಿ ವಾಹನವನ್ನು ಬಳಸುವುದರಿಂದ ವಾಹನದಲ್ಲಿ ಒಯ್ಯಲಾದ ಸರಕುಗಳ ಒಡೆಯ ಅಥವಾ ಅವರ ಅಧಿಕೃತ ಪ್ರತಿನಿಧಿಯನ್ನು ಒಳಗೊಂಡಂತೆ ಯಾರೇ ವ್ಯಕ್ತಿಗೆ ಉಂಟಾಗಬಹುದಾದ

ಮರಣ ಅಥವಾ ದೈಹಿಕ ಕ್ಷತಿ ಅಥವಾ ಮೂರನೇ ಪಕ್ಷಕಾರನ ಸ್ವತ್ತಿಗುಂಟಾಗುವ ಹಾನಿಯ ಬಗ್ಗೆ ಅವನು ಹೊರಬೇಕಾದ ಹೊಣೆಯ ಸಂಬಂಧದಲ್ಲಿ;

(ii) ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕ ಸೇವಾ ವಾಹನವನ್ನು ಉಪಯೋಗಿಸುವುದರಿಂದ ಅದರ ಯಾರೇ ಪ್ರಯಾಣಿಕನಿಗೆ ಉಂಟಾಗುವ ಅಥವಾ ಉದ್ಭವಿಸುವ ಮರಣ ಅಥವಾ ದೈಹಿಕ ಕ್ಷತಿಯ ಸಂಬಂಧದಲ್ಲಿ

– ಮಾಡಿದ ವಿಮಾ ಪಾಲಿಸಿಯಾಗಿರತಕ್ಕದ್ದು:

ಪರಂತು,–

(i)(ಎ) ವಾಹನವನ್ನು ನಡೆಸುವುದರಲ್ಲಿ ತೊಡಗಿರುವ ; ಅಥವಾ

(ಬಿ) ಅದು ಸಾರ್ವಜನಿಕ ಸೇವಾ ವಾಹನವಾದರೆ ಆ ವಾಹನದ ನಿರ್ವಾಹಕನಾತಿ ಅಥವಾ ವಾಹನದಲ್ಲಿ ಟಿಕೆಟ್ಟುಗಳನ್ನು ಪರೀಕ್ಷಿಸುವ ಕೆಲಸದಲ್ಲಿ ತೊಡಗಿರುವ; ಅಥವಾ

(ಸಿ) ಅದು ಸರಕು ವಾಹನವಾದರೆ ಆ ವಾಹನದಲ್ಲಿ ಪ್ರಯಾಣ ಮಾಡುತ್ತಿರುವ

– ಅಂಥ ಯಾರೇ ನೌಕರರ ಮರಣ ಅಥವಾ ದೈಹಿಕ ಕ್ಷತಿಗೆ ಸಂಬಂಧಿಸಿದಂತೆ ಕಾರ್ಮಿಕರ ನಷ್ಟ ಪರಿಹಾರ ಅಧಿನಿಯಮ, 1923 (1923ರ 8)ರ ಮೇರೆಗೆ ಉದ್ಭವಿಸುವ ಹೊಣೆಗಾರಿಕೆಯಲ್ಲದ ವಿಮಾ ಪಾಲಿಸಿಯ ಮೂಲಕ ವಿಮೆ

ಮಾಡಿಸಿದ ವ್ಯಕ್ತಿಯು ನೌಕರನಿಗೆ, ಅವನ ನೇಮಕಾತಿಯಿಂದ ಉದ್ಭವಿಸುವ ಮತ್ತು ಅವನು ಆ ಕೆಲಸದಲ್ಲಿರುವಾಗ ಉಂಟಾದ ಮರಣದ ಬಗೆಗಿನ ಹೊಣೆಗಾರಿಕೆಯನ್ನು ಪೂರೈಸತಕ್ಕದ್ದೆಂದು; ಅಥವಾ

(ii) ಯಾವುದೇ ಕರಾರಿನ ಹೊಣೆಗಾರಿಕೆಯನ್ನು ಪೂರೈಸತಕ್ಕದ್ದೆಂದು ವಿಮಾ ಪಾಲಿಸಿಯನ್ನು ಅಗತ್ಯಪಡಿಸತಕ್ಕದ್ದಲ್ಲ."

11. ಅಧಿನಿಯಮದ 163–ಎ ಪ್ರಕರಣವು ಪೂರ್ವ ನಿರ್ಧಾರಿತವಾಗಿ ರೂಪಿತವಾದ ಸೂತ್ರದ ಮೇಲೆ ಆಧಾರಿತವಾದ ಒಂದು ವಿಶೇಷ ಉಪಬಂಧವಾಗಿದೆ. ಸಂಬಂಧಪಟ್ಟ ಅಂಶಗಳು ಈ ಕೆಳಕಂಡಂತಿವೆ:

i. ಮೋಟಾರು ವಾಹನದ ಮಾಲೀಕನು ಅಥವಾ ಅಧಿಕೃತ ವಿಮಾಕರ್ತನು ಸಂದಾಯ ಮಾಡಲು ಹೊಣೆಯಾಗಿರತಕ್ಕದ್ದು;

ii. ಮೋಟಾರು ವಾಹನ ಬಳಕೆಯಿಂದಾಗಿ ಸಂಭವಿಸಿದ ಅಪಘಾತದ ಕಾರಣದಿಂದ ಸಾವು ಅಥವಾ ಶಾಶ್ವತ ಅಂಗವಿಕಲತೆಯುಂಟಾದ ಸಂದರ್ಭದಲ್ಲಿ;

iii. ಕಾನೂನು ವಾರಸುದಾರರಿಗೆ ಅಥವಾ ಬಾಧಿತನಿಗೆ ಎರಡನೇ ಅನುಸೂಚಿಯಲ್ಲಿ ತಿಳಿಸಿದಂತಹ ಪರಿಹಾರವನ್ನು ಸಂದಾಯ ಮಾಡಬೇಕು.

ಅಧಿಕೃತ ವಿಮಾಕರ್ತನ ಹೊಣೆಗಾರಿಕೆಯು ಪಾಲಿಸಿಗಳ ಅಗತ್ಯತೆಗಳನ್ನು ಆಧರಿಸಿರುತ್ತದೆ ಮತ್ತು ವಿಮಾಕರ್ತನ ಹೊಣೆಗಾರಿಕೆಯ ಪರಿಮಿತಿಗಳು ಅಧಿನಿಯಮದ 147(1)ನೇ ಪ್ರಕರಣದ ವ್ಯಾಪ್ತಿಗೊಳಪಟ್ಟಿರುತ್ತವೆ.

12. ಅಧಿನಿಯಮದ 147(1)ನೇ ಪ್ರಕರಣವು, ಸಾರ್ವಜನಿಕ ಸ್ಥಳದಲ್ಲಿ ವಾಹನದ ಬಳಕೆಯಿಂದ ಉಂಟಾದ ಅಥವಾ ಸಂಭವಿಸಿರುವ, ವಾಹನದಲ್ಲಿ ಸಾಗಿಸುತ್ತಿದ್ದ ಸರಕುಗಳ ಮಾಲೀಕ ಅಥವಾ ಆತನ ಅಧಿಕೃತ ಪ್ರತಿನಿಧಿಯೂ ಒಳಗೊಂಡಂತೆ ಯಾರೇ ವ್ಯಕ್ತಿಯ ಸಾವು ಅಥವಾ ದೈಹಿಕ ಗಾಯಕ್ಕೆ ಸಂಬಂಧಿಸಿದಂತೆ ಅಥವಾ ತೃತೀಯ ಪಕ್ಷಕಾರನ ಯಾವುದೇ ಸ್ವತ್ತಿನ ಹಾನಿಗೆ ಸಂಬಂಧಿಸಿದಂತೆ ವಿಮಾಕರ್ತನು ವಹಿಸಬಹುದಾದಂಥ ಯಾವುದೇ ಹೊಣೆಗಾರಿಕೆಗೆ ಆ ವಿಮಾಕರ್ತನು ಹೊಣೆಗಾರನಾಗಿರುತ್ತಾನೆ ಎಂದು ಉಪಬಂಧಿಸುತ್ತದೆ.

13. (ಮೇಲೆ ತಿಳಿಸಿದ) ***ಮಹದೇವ್ ಪಾಂಡುರಂಗ್ ಪಾಟೀಲ್*** ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ಈ ಕೆಳಕಂಡಂತೆ ನಿರ್ಣಯಿಸಿದೆ:

> *"15. ಆದ್ದರಿಂದ, ಸಾರ್ವಜನಿಕ ಸೇವೆಗಾಗಿ ಉದ್ದೇಶಿಸಿರದ ವಾಹನದ ಪ್ರಯಾಣಿಕರು ಈ ಪ್ರಕರಣದ ವ್ಯಾಪ್ತಿಗೆ ಒಳಪಡುವುದಿಲ್ಲ. ಸದರಿ ಪ್ರಯಾಣಿಕರು ಯಾರೆಂದರೆ, ದ್ವಿಚಕ್ರ ವಾಹನದ ಸಂದರ್ಭದಲ್ಲಿ ಹಿಂಬದಿ ಸವಾರನಾಗಿರುತ್ತಾನೆ ಮತ್ತು ತ್ರಿಚಕ್ರ ಹಾಗೂ ನಾಲ್ಕು ಚಕ್ರ ವಾಹನದ ಸಂದರ್ಭದಲ್ಲಿ, ಸದರಿ ವಾಹನದಲ್ಲಿ ಬಾಡಿಗೆ ಅಥವಾ ಪ್ರತಿಫಲಕ್ಕಾಗಿ ಸಂಚರಿಸದಿರುವ ಆ ವಾಹನದ ಪ್ರಯಾಣಿಕರಾಗಿರುತ್ತಾರೆ. ಹಾಗಾಗಿ, ಅಂಥ ಪ್ರಯಾಣಿಕರಾಗಿ ಸಂಚರಿಸುತ್ತಿದ್ದ ವಾಹನಕ್ಕೆ ಸಂಬಂಧಿಸಿದಂತೆ ತೆಗೆದುಕೊಂಡ ವಿಮಾ ಪಾಲಿಸಿಯು ಅವರನ್ನು ತೃತೀಯ ಪಕ್ಷಕಾರರೆಂದು ಪರಿಗಣಿಸುವುದಿಲ್ಲ ಮತ್ತು ಅಂಥ ವ್ಯಕ್ತಿಗಳ ಅಪಾಯಕ್ಕೆ ಆ ವಿಮೆಯು ವಿಮಾ ರಕ್ಷಣೆ ನೀಡುವುದಿಲ್ಲ. ಇದಕ್ಕೆ ಕಾರಣವೇನೆಂದರೆ, ಬಾಡಿಗೆ ಅಥವಾ ಪ್ರತಿಫಲಕ್ಕಾಗಿ ಸಂಚರಿಸದಿರುವ ಪ್ರಯಾಣಿಕರ ಅಪಾಯಕ್ಕೆ ವಿಮಾ ರಕ್ಷಣೆ*

*ನೀಡಲು 147ನೇ ಪ್ರಕರಣವು ಪಾಲಿಸಿಯುನ್ನು ಅಗತ್ಯಪಡಿಸುವುದಿಲ್ಲ. ಶಾಸನಾತ್ಮಕ ವಿಮೆಯು ಬಾಡಿಗೆ ಅಥವಾ ಪ್ರತಿಫಲಕ್ಕಾಗಿ ಸಂಚರಿಸದ ವಾಹನ ಪ್ರಯಾಣಿಕರಿಗೆ ಆದ ಹಾನಿಗಳಿಗೆ ವಿಮಾ ರಕ್ಷಣೆ ನೀಡುವುದಿಲ್ಲ ಮತ್ತು ವಿಮಾಕರ್ತರು ಅದಕ್ಕೆ ಅಧಿನಿಯಮದ ಅಡಿಯಲ್ಲಿ ಹೊಣೆಗಾರರಾಗುವುದಿಲ್ಲ. ಖಾಸಗಿ ವಾಹನದ ಸಹ ಪ್ರಯಾಣಿಕರು/ಪ್ರಯಾಣಿಕರು/ ವಾಹನದಲ್ಲಿದ್ದರು ತೃತೀಯ ಪಕ್ಷಕಾರ ಎಂಬ ಪದದ ಅರ್ಥ ವ್ಯಾಪ್ತಿಗೆ ಬರುವುದಿಲ್ಲ. ಆದ್ದರಿಂದ, ಅಧಿನಿಯಮದ 147ನೇ ಪ್ರಕರಣದ ಅಡಿಯಲ್ಲಿ ದೊರೆಯುವ ಕಾನೂನು ಬಾಧ್ಯತೆಯನ್ನು ವಾಹನದ ಮಾಲೀಕನ, ಅಂಥ ಖಾಸಗಿ ವಾಹನದಲ್ಲಿನ ಪ್ರಯಾಣಿಕರ ಅಥವಾ ದ್ವಿಚಕ್ರ ವಾಹನದ ಸಂದರ್ಭದಲ್ಲಿ, ಹಿಂಬದಿ ಸವಾರನ ಹಾನಿ ಅಥವಾ ಸಾವಿಗೆ ವ್ಯಾಪಿಸಲಾಗದು. ಸಾರ್ವಜನಿಕ ಸೇವೆಯ ವಾಹನವಲ್ಲದ ವಾಹನದಲ್ಲಿ ಬಾಡಿಗೆ ಅಥವಾ ಪ್ರತಿಫಲಕ್ಕಾಗಿ ಸಂಚರಿಸದೆ ಮುಫತ್ತಾಗಿ ಸಂಚರಿಸುವ ಪ್ರಯಾಣಿಕರನ್ನು ತೃತೀಯ ಪಕ್ಷಕಾರರೆಂದು ಅರ್ಥೈಸಲಾಗದು."*

14. ***ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂ. ಲಿ., –ವಿರುದ್ಧ– ಆಶಾರಾಣಿ ಮತ್ತು ಇತರರು*** [7]**,** ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು, ಅಧಿನಿಯಮದ 147ನೇ ಪ್ರಕರಣದ ಮೇರೆಗಿನ ಮತ್ತು ಅದು 1994ರ ತಿದ್ದುಪಡಿಯಾಗುವುದಕ್ಕೆ ಮುಂಚಿನ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ವಾಹನದಲ್ಲಿ ಸಂಚರಿಸುತ್ತಿದ್ದ ಸರಕುಗಳ ಮಾಲೀಕ ಅಥವಾ ಆತನ ಅಧಿಕೃತ ಪ್ರತಿನಿಧಿಗೆ ವಿಮಾಕರ್ತನು ನಷ್ಟ ಪರಿಹಾರವನ್ನು ಸಂದಾಯ ಮಾಡಲು ಹೊಣೆಗಾರನಾಗುವುದಿಲ್ಲವೆಂದು ನಿರ್ಣಯಿಸಿದೆ. "ವಾಹನದಲ್ಲಿ ಸಂಚರಿಸುವ ಸರಕುಗಳ ಮಾಲೀಕ ಅಥವಾ ಆತನ ಅಧಿಕೃತ ಪ್ರತಿನಿಧಿಯೂ

7. (2003) 2 ಎಸ್‌ಸಿಸಿ 223

ಒಳಗೊಂಡಂತೆ ಯಾರೇ ವ್ಯಕ್ತಿಗೆ ಆದ ಹಾನಿ'' ಎಂಬ ಪದಗಳನ್ನು ಸೇರ್ಪಡೆಗೊಳಿಸಿದ 1994ರ ತಿದ್ದುಪಡಿ ಅಧಿನಿಯಮದ ಶಾಸನಾತ್ಮಕ ಬದ್ಧತೆಯ ಕಾರಣಗಳು ಮತ್ತು ಉದ್ದೇಶಗಳನ್ನು ಪರಿಗಣಿಸಿ, ಈ ಕೆಳಕಂಡಂತೆ ನಿರ್ಣಯಿಸಿದೆ:

> *"9. ಸತ್ಪಾಲ್ ಮೊಕದ್ದಮೆಯಲ್ಲಿ ಈ ನ್ಯಾಯಾಲಯವು, ಮೋಟಾರು ವಾಹನಗಳ ಅಧಿನಿಯಮ, 1939ರ 95(1)ನೇ ಪ್ರಕರಣದ ಉಪಬಂಧಗಳು ತಿದ್ದುಪಡಿಯಾಗುವುದಕ್ಕಿಂತ ಮುಂಚೆ ಇದ್ದಂತೆ ಮೋಟಾರು ವಾಹನಗಳ ಅಧಿನಿಯಮ, 1988ರ 147(1)ನೇ ಪ್ರಕರಣವನ್ನು ಹೋಲುತ್ತವೆಂದು ಪರಿಭಾವಿಸಿತ್ತು. ಆದರೆ ಆ ಉಪಬಂಧಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದಾಗ 1994ರ ತಿದ್ದುಪಡಿಗೆ ಮುಂಚೆ ಸರಕುಗಳ ವಾಹನದಲ್ಲಿ ಸಂಚರಿಸುವ ಸರಕುಗಳ ಮಾಲೀಕ ಅಥವಾ ಆತನ ಅಧಿಕೃತ ಪ್ರತಿನಿಧಿಗೆ ವಿಮಾರಕ್ಷಣೆ ನೀಡುವುದು ವಿಮಾಕರ್ತನಿಗೆ ಅನಿವಾರ್ಯವೇನಾಗಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಈ ನ್ಯಾಯಾಲಯವು ತಪ್ಪು ಭಾವನೆಯಲ್ಲಿ, ಅಪಘಾತ ಸಂಭವಿಸಿದ ಸರಕುಗಳ ವಾಹನದಲ್ಲಿ ಸಂಚರಿಸುತ್ತಿರುವ ಸರಕುಗಳ ಮಾಲೀಕನಿಗೆ ಅಥವಾ ಆತನ ಅಧಿಕೃತ ಪ್ರತಿನಿಧಿಗೆ ಉಂಟಾದ ಸಾವು ಅಥವಾ ದೈಹಿಕ ಹಾನಿಗೆ ಸಂಬಂಧಿಸಿದಂತೆ ಪರಿಹಾರವನ್ನು ನೀಡಲು ವಿಮಾ ಕರ್ತನು ಹೊಣೆಗಾರನಾಗುತ್ತಾನೆಂಬ ನಿರ್ಣಯಕ್ಕೆ ಬಂದಿತ್ತು. 1994ರ ಮೋಟಾರು ವಾಹನಗಳ ತಿದ್ದುಪಡಿ ಅಧಿನಿಯಮವನ್ನು, ಅದರಲ್ಲೂ ಮುಖ್ಯವಾಗಿ 46ನೇ ಪ್ರಕರಣವನ್ನು ಪರಿಶೀಲಿಸಿದರೆ, ಆ ಮೂಲಕ ಮೂಲ ಅಧಿನಿಯಮದಲ್ಲಿದ್ದ "ಯಾವುದೇ ವ್ಯಕ್ತಿಗೆ ಹಾನಿ" ಎಂಬ ಪದಾವಳಿಗೆ ಬದಲಾಗಿ "ವಾಹನದಲ್ಲಿ ಸಂಚರಿಸುವ ಸರಕುಗಳ ಮಾಲೀಕ ಅಥವಾ ಆತನ ಅಧಿಕೃತ ಪ್ರತಿನಿಧಿಯೂ ಒಳಗೊಂಡಂತೆ ಯಾರೇ ವ್ಯಕ್ತಿಗೆ ಆದ*

*ಹಾನಿ" ಎಂಬ ಪದಾವಳಿಯನ್ನು ಪ್ರತಿಯೋಜಿಸಲಾಗಿದೆ. ಮೇಲೆ ತಿಳಿಸಿದ 1994ರ ತಿದ್ದುಪಡಿಗೆ ಮುಂಚೆ "ಯಾರೇ ವ್ಯಕ್ತಿಗೆ" ಎಂಬ ಪದಾವಳಿಗೆ ಎಷ್ಟೇ ವ್ಯಾಪಕವಾದ ಅರ್ಥವನ್ನು ನೀಡಿದರೂ ಕೂಡ, ವಾಹನದಲ್ಲಿ ಸಂಚರಿಸುವ ಸರಕುಗಳ ಮಾಲೀಕ ಅಥವಾ ಆತನ ಅಧಿಕೃತ ಪ್ರತಿನಿಧಿಯನ್ನು ಅದು ಒಳಗೊಳ್ಳುವುದಿಲ್ಲ ಎಂಬ ನಿರ್ಣಯಕ್ಕೆ ಬರುವುದನ್ನು ತಡೆಯಲಾಗುವುದಿಲ್ಲ. 46ನೇ ಖಂಡದ ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಯೂ ಕೂಡ ವಿಮಾ ಪಾಲಿಸಿಯ ಅಡಿಯಲ್ಲಿನ ಹೊಣೆಗಾರಿಕೆಯ ಉದ್ದೇಶಗಳಿಗಾಗಿ 'ವಾಹನದಲ್ಲಿ ಸಂಚರಿಸುವ ಸರಕುಗಳ ಮಾಲೀಕ ಅಥವಾ ಆತನ ಅಧಿಕೃತ ಪ್ರತಿನಿಧಿಯನ್ನೂ ಸೇರ್ಪಡೆಗೊಳಿಸಲು 147ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಉದ್ದೇಶಿಸಿದೆ ಎಂದು ಹೇಳಿದೆ. ಕೆಲವೊಮ್ಮೆ ಶಾಸಕಾಂಗವು ಶಾಸನದಲ್ಲಿ ಅಂತರ್ಗತವಾಗಿರುವ ವಸ್ತುಸ್ಥಿತಿಯನ್ನು ವಿವರಣಾತ್ಮಕವಾಗಿ ಮತ್ತು ಸ್ಪಷ್ಟೀಕರಣದ ರೂಪದಲ್ಲಿ ತಿಳಿಸಿ ಕಾನೂನನ್ನು ತಿದ್ದುಪಡಿ ಮಾಡುತ್ತದೆ ಎಂಬುದು ಸತ್ಯವೆಂಬುದರಲ್ಲಿ ಸಂದೇಹವಿಲ್ಲ, ಆದರೆ, 1994ರ ತಿದ್ದುಪಡಿಗೆ ಮುಂಚೆ ಇದ್ದಂತೆ ಮತ್ತು 1994ರಲ್ಲಿ ತಿದ್ದುಪಡಿಯಾದ ನಂತರ ಇದ್ದಂತೆ ಶಾಸನದಲ್ಲಿ ಬಳಸಲಾದ ಪದಗಳಿಗೆ ಸಾಮಾನ್ಯ ಅರ್ಥವನ್ನೇ ನೀಡಲಾಗಿದ್ದು, ಮೇಲೆ ಉಲ್ಲೇಖಿಸಿದ ತಿದ್ದುಪಡಿಯಾದ ಉಪಬಂಧಗಳಲ್ಲಿ ಲಗತ್ತಿಸಿರುವ ಉದ್ದೇಶಗಳು ಮತ್ತು ಕಾರಣಗಳನ್ನು ಗಮನದಲ್ಲಿಟ್ಟುಕೊಂಡರೆ, "ಯಾವುದೇ ವ್ಯಕ್ತಿಗೆ ಹಾನಿ" ಎಂದು ಪೂರ್ವ ಅಸ್ತಿತ್ವದಲ್ಲಿದ್ದ ಪದಾವಳಿಗೆ ಸೇರ್ಪಡೆಗೊಳಿಸಲಾಗಿರುವ "ವಾಹನದಲ್ಲಿ ಸಂಚರಿಸುವ*

*ಸರಕುಗಳ ಮಾಲೀಕ ಅಥವಾ ಆತನ ಅಧಿಕೃತ ಪ್ರತಿನಿಧಿಯೂ ಒಳಗೊಂಡಂತೆ" ಎಂಬ ಪದಾವಳಿಯು ಪೂರ್ವ ಅಸ್ತಿತ್ವದಲ್ಲಿದ್ದ ಶಾಸನದ ಸ್ಪಷ್ಟೀಕರಣವಾಗಿದೆ ಅಥವಾ ವಿವರಣಾತ್ಮಕವಾದುದಾಗಿದೆ ಎಂದು ಅರ್ಥೈಸುವುದು ನಮಗೆ ಕಷ್ಟಕರವಾಗುತ್ತದೆ. ಮತ್ತೊಂದೆಡೆ, ಇದು, ಸರಕುಗಳ ವಾಹನದ ಸಂದರ್ಭದಲ್ಲಿಯೂ ಕೂಡ ಆ ವಾಹನವು ಅಪಘಾತಕ್ಕೀಡಾಗಿ ಸರಕುಗಳ ಮಾಲೀಕ ಅಥವಾ ಆತನ ಪ್ರತಿನಿಧಿ ಇಬ್ಬರಲ್ಲಿ ಯಾರಾದರೂ ಮರಣ ಹೊಂದಿದಾಗ ಅಥವಾ ದೈಹಿಕ ಹಾನಿಗೀಡಾದಾಗ ಸರಕುಗಳ ವಾಹನದಲ್ಲಿ ಸಂಚರಿಸುತ್ತಿದ್ದ ಸರಕುಗಳ ಮಾಲೀಕನಿಗೆ ಅಥವಾ ಆತನ ಅಧಿಕೃತ ಪ್ರತಿನಿಧಿಗೆ ವಿಮಾಕರ್ತನು ವಿಮಾ ರಕ್ಷಣೆ ನೀಡುವುದನ್ನು 147ನೇ ಪ್ರಕರಣದ ವ್ಯಾಪ್ತಿಗೆ ತರಲು ಮತ್ತು ಅದನ್ನು ಕಡ್ಡಾಯಗೊಳಿಸಲು ಶಾಸಕಾಂಗವು ಬಯಸಿರುವುದನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಆದ್ದರಿಂದ ಸತ್ಪಾಲ್ ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಇದನ್ನು ಸರಿಯಾಗಿ ತೀರ್ಮಾನಿಸಿಲ್ಲವೆಂದೇ ನಿರ್ಣಯಿಸಬೇಕಾಗಿದ್ದು, ಆ ಕಾರಣವಾಗಿ ನ್ಯಾಯಾಧಿಕರಣದ ಅಂತೆಯೇ ಉಚ್ಚ ನ್ಯಾಯಾಲಯದ ಪ್ರಶ್ನಿತ ತೀರ್ಪನ್ನು ತಳ್ಳಿಹಾಕಿ, ಈ ಮೇಲ್ಮನವಿಗಳನ್ನು ಪುರಸ್ಕರಿಸಲಾಗಿದೆ. ಸರಕುಗಳ ವಾಹನವು ಅಪಘಾತಕ್ಕೀಡಾಗಿ, ಸರಕುಗಳ ಮಾಲೀಕ ಅಥವಾ ಆತನ ಪ್ರತಿನಿಧಿಯು ಮರಣ ಹೊಂದಿದಾಗ ಅಥವಾ ದೈಹಿಕ ಹಾನಿಗೊಳಗಾದಾಗ ಸರಕುಗಳಲ್ಲಿ ಸಂಚರಿಸುತ್ತಿದ್ದ ಸರಕುಗಳ ಮಾಲೀಕನಿಗೆ ಅಥವಾ ಆತನ ಅಧಿಕೃತ ಪ್ರತಿನಿಧಿಗೆ ಪರಿಹಾರವನ್ನು ಸಂದಾಯ ಮಾಡಲು ವಿಮಾಕರ್ತನು ಹೊಣೆಗಾರನಾಗುವುದಿಲ್ಲವೆಂದು ನಿರ್ಣಯಿಸಲಾಗಿದೆ."*

15. ***ಯುನೈಟೆಡ್ ಇಂಡಿಯಾ ಇನ್‌ಶ್ಯೂರೆನ್ಸ್ ಕಂ.ಅ., –ವಿರುದ್ಧ– ತಿಲಕ್ ಸಿಂಗ್ ಮತ್ತು ಇತರರು* [8],** ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ನಿರ್ಣಯಿಸಿದೆ:

> *"18. ಹಾಗಾಗಿ, 1939ರ ಅಧಿನಿಯಮದ ಅಡಿಯಲ್ಲಿಯೂ ಕೂಡ, ಪಾಲಿಸಿಯಲ್ಲಿ ಮುಫತ್ತಾಗಿ ಸಂಚರಿಸುವ ಪ್ರಯಾಣಿಕರಿಗೆ ಸಂಬಂಧಿಸಿದಂತೆ ನಿರ್ದಿಷ್ಟ ವಿಮಾ ರಕ್ಷಣೆ ಇದ್ದ ಹೊರತು, ಅದಕ್ಕೆ ವಿಮಾಕರ್ತನು ಹೊಣೆಯಲ್ಲ ಎಂಬುದು ಸುಸ್ಥಾಪಿತವಾದ ಕಾನೂನಿನ ನಿಲುವಾಗಿತ್ತು. 1988ರ ಅಧಿನಿಯಮದ 147ನೇ ಪ್ರಕರಣದ ಕರಡು ತಯಾರಿಸುವಾಗ 95(1)ನೇ ಪ್ರಕರಣದ ಪರಂತುಕದ (ii)ನೇ ಖಂಡವನ್ನು ಬಿಟ್ಟುಬಿಟ್ಟಿರುವುದು ನಮಗೆ ಕಂಡು ಬಂದಿದೆ. 1988ರ ಅಧಿನಿಯಮದ ಮೇರೆಗೆ (1) (ಬಿ) ಉಪ–ಪ್ರಕರಣದ ಅಡಿಯಲ್ಲಿ ಈಗ ಶಾಸನದ ಮೇರೆಗೆ ಅಗತ್ಯವಿರುವ ಕಡ್ಡಾಯ ವಿಮಾ ಪಾಲಿಸಿಯು ವಾಹನದ ಮಾಲೀಕನು ವಹಿಸಬಹುದಾದ ಯಾವುದೇ ಹೊಣೆಗಾರಿಕೆಯ ಬಗ್ಗೆ ಈ ಮುಂದಿನ ಉಪಬಂಧ ಕಲ್ಪಿಸಲೇಬೇಕಾಗುತ್ತದೆ:*
>
> *"ಸಾರ್ವಜನಿಕ ಸ್ಥಳದಲ್ಲಿ ವಾಹನವನ್ನು ಬಳಸಿದ ಕಾರಣದಿಂದಾಗಿ ಅಥವಾ ಆ ಪರಿಣಾಮದಿಂದಾಗಿ ಆ ವಾಹನದಲ್ಲಿ ಸಂಚರಿಸುತ್ತಿದ್ದ ಸರಕುಗಳ ಮಾಲೀಕ ಅಥವಾ ಆತನ ಅಧಿಕೃತ ಪ್ರತಿನಿಧಿಯೂ ಒಳಗೊಂಡಂತೆ ಯಾರೇ ವ್ಯಕ್ತಿಯು ಸಾವಿಗೆ ಅಥವಾ ದೈಹಿಕ ಹಾನಿಗೆ ಸಂಬಂಧಿಸಿದಂತೆ ಅಥವಾ ತೃತೀಯ ಪಕ್ಷಕಾರನ ಯಾವುದೇ ಸ್ವತ್ತಿಗೆ ಆದ ಹಾನಿಗೆ ಸಂಬಂಧಿಸಿದಂತೆ".*

8. (2006) 4 ಎಸ್‌ಸಿಸಿ 404

> *21. ಆಶಾರಾಣಿ ಮೊಕದ್ದಮೆಯಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಸರಕು ಸಾಗಣೆ ವಾಹನದಲ್ಲಿ ಸಾಗುತ್ತಿದ್ದ ಪ್ರಯಾಣಿಕರಿಗೆ ಸಂಬಂಧಿಸಿದ್ದರೂ, ಅವು ಅಷ್ಟೇ ಪರಿಣಾಮಕಾರಿಯಾಗಿ ಯಾವುದೇ ಇತರ ವಾಹನದಲ್ಲಿ ಮುಫತ್ತಾಗಿ ಸಂಚರಿಸುವ ಪ್ರಯಾಣಿಕರಿಗೂ ಕೂಡ ಅನ್ವಯವಾಗುತ್ತವೆ ಎಂಬುದು ನಮ್ಮ ಅಭಿಪ್ರಾಯವಾಗಿದೆ. ಹಾಗಾಗಿ, ವಿಮಾ ಪಾಲಿಸಿಯು ಒಂದು ಶಾಸನಾತ್ಮಕವಾದ ಪಾಲಿಸಿಯಾಗಿರುವುದರಿಂದ ಹಿಂಬದಿ ಸವಾರನಾಗಿದ್ದ ಮೃತ ರಾಜೇಂದರ್ ಸಿಂಗ್‌ಗೆ ಆದ ಹಾನಿಯ ಕಡೆಗೆ ಯಾವುದೇ ಹೊಣೆಯನ್ನು ಹೊರುವುದಿಲ್ಲವೆಂಬ ಮತ್ತು ಆ ಕಾರಣದಿಂದ ಮುಫತ್ತಾಗಿ ಸಂಚರಿಸುವ ಪ್ರಯಾಣಿಕನಿಗೆ ಉಂಟಾದ ಸಾವು ಅಥವಾ ದೈಹಿಕ ಹಾನಿಗೆ ವಿಮಾ ರಕ್ಷಣೆಯನ್ನು ಒದಗಿಸುವುದಿಲ್ಲವೆಂಬ ಮೇಲ್ಮನವಿದಾರ ವಿಮಾ ಕಂಪನಿಯ ವಾದವನ್ನು ನಾವು ಎತ್ತಿ ಹಿಡಿಯಲೇಬೇಕಾಗಿದೆ".*

16. ಕ್ಲೇಮುದಾರರ ಪರ ಮಾನ್ಯ ನ್ಯಾಯವಾದಿಯು (ಮೇಲೆ ತಿಳಿಸಿದ) ***ನಾಗರಾಜು*** ಮೊಕದ್ದಮೆಯ ಮೇಲೆ ಹೆಚ್ಚು ಅವಲಂಬಿತವಾಗಿದ್ದು, ಅದು, ಹಿಂಬದಿ ಸವಾರನಿಗೆ ಪಾಲಿಸಿಯು ವಿಮಾ ರಕ್ಷಣೆ ನೀಡಿಲ್ಲವೆಂಬುದನ್ನು ಮತ್ತು ಅದರ ಹೊಣೆಯು ಪರಿಮಿತವಾದದ್ದು ಎಂಬುದನ್ನು ವಿಮಾ ಕಂಪನಿಯು ಪ್ರಶ್ನಿಸದಿರುವ ಮೊಕದ್ದಮೆಗೆ ಸಂಬಂಧಿಸಿದ್ದಾಗಿದೆ. ಆ ಮೊಕದ್ದಮೆಯಲ್ಲಿ ವಿಮಾ ಕಂಪನಿಯು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಅಧಿನಿಯಮದ ಅಡಿಯಲ್ಲಿ ಲಭ್ಯವಿರುವ ಶಾಸನಾತ್ಮಕ ರಕ್ಷಣೆಗಳನ್ನು ಅವಲಂಬಿಸಿಲ್ಲ. ಆ ಸಂದರ್ಭದಲ್ಲಿ ಹಿಂಬದಿ ಸವಾರನು ತೃತೀಯ ಪಕ್ಷಕಾರನಾಗುತ್ತಾನೆಂದು ಮತ್ತು ವಿಮಾಕರ್ತನನ್ನು ಹೊಣೆಗಾರಿಕೆಯಿಂದ ವಿಮುಕ್ತಿಗೊಳಿಸಲಾಗುವುದಿಲ್ಲವೆಂದು ನಿರ್ಣಯಿಸಲಾಗಿದೆ. ಪ್ರಸ್ತುತ ಮೊಕದ್ದಮೆಯಲ್ಲಿ, ವಿಮಾಕರ್ತನ ನಿರ್ದಿಷ್ಟ ಆಶಯವೇನೆಂದರೆ, ಸಹ ಪ್ರಯಾಣಿಕ/ಮುಫತ್ತಾಗಿ ಸಂಚರಿಸಿದ ಪ್ರಯಾಣಿಕನ ಅಪಾಯಕ್ಕೆ ವಿಮಾ ಪಾಲಿಸಿಯ ಅಡಿಯಲ್ಲಿ ವಿಮಾ ರಕ್ಷಣೆಯಿಲ್ಲ ಎಂಬುದಾಗಿದೆ. ತಿಳಿಸಿದ ಸಂದರ್ಭಗಳ ಹಿನ್ನೆಲೆಯಲ್ಲಿ, ಕ್ಲೇಮುದಾರರ ಪರ

ಮಾನ್ಯ ನ್ಯಾಯವಾದಿಯು ಆಧಾರವಾಗಿಟ್ಟುಕೊಂಡ ತೀರ್ಪು ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಅನ್ವಯವಾಗುವುದಿಲ್ಲ.

17. ಅದೇ ರೀತಿ, ಕ್ಲೇಮುದಾರರ ಪರ ಮಾನ್ಯ ನ್ಯಾಯವಾದಿಯು (ಮೇಲೆ ತಿಳಿಸಿದ) ***ರಾಮಚಂದ್ರ*** ಮೊಕದ್ದಮೆಯು ಮತ್ತೊಂದು ತೀರ್ಪನ್ನು ಆಧಾರವಾಗಿಟ್ಟುಕೊಂಡಿದ್ದು ಹೊಸ ಅಧಿನಿಯಮದ ಅಡಿಯಲ್ಲಿ ಪ್ರಯಾಣಿಕರನ್ನು ಸಾಗಿಸುವ ವಾಹನದಲ್ಲಿನ ಪ್ರಯಾಣಿಕನಿಗೆ ವಿಮಾ ರಕ್ಷಣೆ ನೀಡುವ ಅಗತ್ಯ ವಿಮಾಕರ್ತನಿಗಿಲ್ಲ ಎಂದು ನಿರ್ಣಯಿಸಿರುವ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಮಾನ್ಯ ನ್ಯಾಯಾಲಯದ ಗಮನಕ್ಕೆ ತಂದಿಲ್ಲವೆಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಈ ಅಂಶವು, (ಮೇಲೆ ತಿಳಿಸಿದ) ***ತಿಲಕ್ ಸಿಂಗ್*** ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಮತ್ತು (ಮೇಲೆ ತಿಳಿಸಿದ) ***ಮಹಾದೇವ್ ಪಾಂಡುರಂಗ್ ಪಾಟೀಲ್*** ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಪೂರ್ವ ನಿರ್ಣೀತ ಅಂಶವಾಗಿ ಉಳಿಯುವುದಿಲ್ಲ.

18. (ಮೇಲೆ ತಿಳಿಸಿದ) ***ಮಹಾದೇವ್ ಪಾಂಡುರಂಗ್ ಪಾಟೀಲ್*** ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು, ಸಾರ್ವಜನಿಕ ಸೇವೆಗಾಗಿ ಉದ್ದೇಶಿಸಿರದ ವಾಹನದ ಪ್ರಯಾಣಿಕರು, ಎಂದರೆ, ಬಾಡಿಗೆ ಮತ್ತು ಪ್ರತಿಫಲಕ್ಕಾಗಿ ಸಂಚರಿಸದ ಮೂರು ಚಕ್ರ ಹಾಗೂ ನಾಲ್ಕು ಚಕ್ರ ವಾಹನದ ಪ್ರಯಾಣಿಕರು ಮತ್ತು ದ್ವಿ–ಚಕ್ರ ವಾಹನದ ಸಂದರ್ಭದಲ್ಲಿ ಹಿಂಬದಿ ಸವಾರನು ಅಧಿನಿಯಮದ 147(1)ನೇ ಪ್ರಕರಣದ ವ್ಯಾಪ್ತಿಗೆ ಒಳಪಡುವುದಿಲ್ಲ ಎಂದು ಸ್ಪಷ್ಟವಾಗಿ ನಿರ್ಣಯಿಸಿದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಖಾಸಗಿ ವಾಹನದಲ್ಲಿ ಸಂಚರಿಸುವ ಸಹ ಪ್ರಯಾಣಿಕರು/ವಾಹನದಲ್ಲಿರುವವರು/ಮುಫತ್ತಾಗಿ ಸಂಚರಿಸುವ ಪ್ರಯಾಣಿಕರನ್ನು ತೃತೀಯ ಪಕ್ಷಕಾರರೆಂದು ಅರ್ಥೈಸಲಾಗುವುದಿಲ್ಲ.

19. ಮೇಲೆ ಕಾಣಿಸಿದ ತೀರ್ಪುಗಳ ಹಿನ್ನೆಲೆಯಲ್ಲಿ, ವಿಮಾ ಪಾಲಿಸಿಯು ಒಂದು ಕಾರ್ಯ ನಿರ್ವಹಣಾತ್ಮಕ ಪಾಲಿಸಿಯಾಗಿರುವುದರಿಂದ, ಖಾಸಗಿ ವಾಹನದ

ಮುಫತ್ತಾಗಿ ಸಂಚರಿಸುವ ಪ್ರಯಾಣಿಕರ/ವಾಹನದಲ್ಲಿದ್ದವರ ಅಪಾಯಗಳಿಗೆ ವಿಮಾ ರಕ್ಷಣೆ ನೀಡಲು ಹೆಚ್ಚುವರಿ ವಿಮಾ ಕಂತನ್ನು ಸಂದಾಯ ಮಾಡಿದ ಹೊರತು ಅಂಥ ಪ್ರಯಾಣಿಕರ ಹಾನಿಗಾಗಿ ಅಥವಾ ಸಾವಿಗಾಗಿ ಮಾಲೀಕನಿಗೆ ನಷ್ಟಭರ್ತಿ ತುಂಬಿಕೊಡಲು ಅಧಿನಿಯಮದ 147ನೇ ಪ್ರಕರಣದ ಅಡಿಯಲ್ಲಿ ವಿಮಾಕರ್ತನಿಗೆ ಯಾವುದೇ ಕಾನೂನಾತ್ಮಕ ಬಾಧ್ಯತೆಯಿಲ್ಲವೆಂಬುದು ಎಲ್ಲರಿಗೂ ತಿಳಿದಿರುವ ಸಾಮಾನ್ಯ ಕಾನೂನಾಗಿದೆ. ಮಾಲೀಕ– ಚಾಲಕನಿಗೆ ಕಡ್ಡಾಯ ವೈಯಕ್ತಿಕ ಅಪಘಾತ ವಿಮಾ ರಕ್ಷಣೆ ಒದಗಿಸುವ ಮೋಟಾರು ಪಾಲಿಸಿಯ ಅಡಿಯಲ್ಲಿ ವೈಯಕ್ತಿಕ ಅಪಘಾತ (ಪಿಎ) ವಿಮಾ ರಕ್ಷಣೆಗಾಗಿ ಭಾರತೀಯ ಮೋಟಾರು ತೆರಿಗೆಯ ಜಿಆರ್.36 ಉಪಬಂಧ ಕಲ್ಪಿಸುತ್ತದೆ. ಪ್ರಸ್ತುತ ಮೊಕದ್ದಮೆಯಲ್ಲಿ, ನಿ.ಆರ್.1ರ ಅಡಿಯಲ್ಲಿ ವಸೂಲಿ ಮಾಡಿರುವ ವೈಯಕ್ತಿಕ ಅಪಘಾತ ವಿಮೆಯು ಮಾಲೀಕ – ಚಾಲಕನ ವೈಯಕ್ತಿಕ ಅಪಘಾತ ವಿಮಾ ರಕ್ಷಣೆಯ ಕಡೆಗೆ ಮಾಡಿದ ಹೆಚ್ಚುವರಿ ವಿಮೆಯಾಗಿದೆಯೇ ಹೊರತು, ಸಹ ಪ್ರಯಾಣಿಕ/ವಾಹನದಲ್ಲಿ ಸಂಚರಿಸುವವರಿಗಲ್ಲ. ನಿ.ಆರ್.1 ರಲ್ಲಿನ ವಿಮಾ ಪಾಲಿಸಿಯು, ಒಪ್ಪಿಕೊಳ್ಳಲಾಗಿರುವಂತೆ ತೃತೀಯ ಪಕ್ಷಕಾರರ ಅಪಾಯಕ್ಕೆ ವಿಮಾ ರಕ್ಷಣೆ ನೀಡುವ ಒಂದು ಕಾರ್ಯ ನಿರ್ವಹಣಾತ್ಮಕ ಪಾಲಿಸಿಯಾಗಿದೆ.

20. ಕ್ಲೇಮು ಅರ್ಜಿಯನ್ನು, 'ದೋಷಮುಕ್ತ ಹೊಣೆಗಾರಿಕೆ' ಆಧಾರದ ಮೇಲೆ ಅಧಿನಿಯಮದ 163–ಎ ಪ್ರಕರಣದ ಅಡಿಯಲ್ಲಿ ಸಲ್ಲಿಸಲಾಗಿದ್ದರೂ, ಪಾಲಿಸಿಯ ಅಗತ್ಯತೆಗಳು ಮತ್ತು ವಿಮಾ ಕಂಪನಿಯ ಹೊಣೆಗಾರಿಕೆಯ ಮಿತಿಗಳು, ನಿರ್ದಿಷ್ಟ ವಿಮಾ ರಕ್ಷಣಾ ಪಾಲಿಸಿಯ ಮೂಲಕ ವಿಮಾರಕ್ಷಣೆ ದೊರೆಯುವ ಹೊರತಾಗಿ, ಖಾಸಗಿ ವಾಹನದ ಉಚಿತ ಪ್ರಯಾಣಿಕರು/ವಾಹನದಲ್ಲಿದ್ದವರು/ಸಹ ಪ್ರಯಾಣಿಕರನ್ನು ಹೊರತುಪಡಿಸಿ ತೃತೀಯ ಪಕ್ಷಕಾರರಿಗೆ ಸಂಬಂಧಪಡುವ ಅಧಿನಿಯಮದ 147ನೇ ಪ್ರಕರಣದ ವ್ಯಾಪ್ತಿಗೆ ಒಳಪಡುತ್ತವೆ. ಅದೇ ವಿಶ್ಲೇಷಣಾ ಹೋಲಿಕೆಯು ಅಧಿನಿಯಮದ 163–ಎ ಪ್ರಕರಣದ ಮೇರೆಗಿನ 'ಬಾಧಿತ'ನಿಗೆ ಅನ್ವಯವಾಗುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಪಾಲಿಸಿಯ ಸ್ವರೂಪ ಮತ್ತು ಪಾಲಿಸಿಯ ಷರತ್ತುಗಳ ಮಾಲೀಕನ ಅಥವಾ ಅಧಿಕೃತ ವಿಮಾಕರ್ತನ

ಸುವ್ಯಕ್ತವಾದ ಹೊಣೆಗಾರಿಕೆ ದೃಷ್ಟಿಯ ಹಿನ್ನೆಲೆಯಲ್ಲಿ ಅಧಿನಿಯಮದ 163–ಎ ಪ್ರಕರಣದ ಮೇರೆಗಿನ ಕ್ಲೇಮಿಗೆ ಅನ್ವಯುವಾಗುತ್ತವೆ. ಪಾಲಿಸಿಯು ವ್ಯಾಪಕವಾದುದಾಗಿದ್ದರೆ, ಖಾಸಗಿ ವಾಹನದ ಸಹ ಪ್ರಯಾಣಿಕರು/ವಾಹನದಲ್ಲಿದ್ದವರು/ ಉಚಿತ ಪ್ರಯಾಣಿಕರ ಅಪಾಯಕ್ಕೆ ವಿಮಾ ರಕ್ಷಣೆ ನೀಡುವುದಕ್ಕೆ ಸಂಬಂಧಿಸಿದಂತೆ ಯಾವುದೇ ದುರಾಕ್ಷೇಪಣೆ ಇರುತ್ತಿರಲಿಲ್ಲ ಎಂದು ಹೇಳುವ ಅಗತ್ಯತೆಯು ತೀರಾ ವಿರಳವಾಗಿರುತ್ತದೆ. ತೃತೀಯ ಪಕ್ಷಕಾರರ ಗಂಡಾಂತರಗಳಿಗೆ ವಿಮಾ ರಕ್ಷಣೆ ನೀಡುವ ಶಾಸನಾತ್ಮಕ ಪಾಲಿಸಿಯ ಸಂದರ್ಭಕ್ಕೆ ಮಾತ್ರ ಇದು ಸೀಮಿತವಾಗಿರುತ್ತದೆ. ಪಾಲಿಸಿಯ ವಿಮಾ ರಕ್ಷಣೆಯನ್ನು ವಿಸ್ತರಿಸುವುದಕ್ಕೆ ಹೆಚ್ಚುವರಿ ವಿಮಾ ಕಂತನ್ನು ಸಂದಾಯ ಮಾಡಿದ ಹೊರತು, ಖಾಸಗಿ ವಾಹನದ ತೃತೀಯ ಪಕ್ಷಕಾರರನ್ನು ಹೊರತುಪಡಿಸಿ ಉಚಿತ ಪ್ರಯಾಣಿಕರಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಮಾಲೀಕನಿಗೆ ನಷ್ಟ ಭರ್ತಿ ತುಂಬಿಕೊಡಲು ವಿಮಾಕರ್ತನು ಹೊಣೆಗಾರನಾಗುವುದಿಲ್ಲ. ಸದರಿ ವಾಹನದ ವಿಮಾಕರ್ತನು ಖಾಸಗಿ ವಾಹನದ ಸಹ ಪ್ರಯಾಣಿಕರು/ವಾಹನದಲ್ಲಿದ್ದವರ ವೈಯಕ್ತಿಕ ಅಪಘಾತ(ಪಿ.ಎ.) ದ ಕಡೆಗೆ 100/– ರೂ. ಹೆಚ್ಚುವರಿ ವಿಮಾ ಕಂತನ್ನು ಪಡೆದಿದ್ದಾನೆಂಬ ತಪ್ಪುಗ್ರಹಿಕೆಯನ್ನು ನ್ಯಾಯಾಧಿಕರಣವು ತಳೆದಿರುವುದು ಭಾರತೀಯ ಮೋಟಾರು ತೆರಿಗೆ (ಐಎಂಟಿ)ಯ ಜಿ.ಆರ್.ಸಂ.36ರ ಹಿನ್ನೆಲೆಯಲ್ಲಿ ಅಸಮರ್ಥನೀಯವಾದುದಾಗಿದೆ. ಆ ಕಾರಣದಿಂದ ಮೇಲ್ಮನವಿದಾರ–ವಿಮಾ ಕಂಪನಿಯ ಮೇಲೆ ನ್ಯಾಯಾಧಿಕರಣವು ಹೊರಿಸಿದ ಹೊಣೆಯನ್ನು ರದ್ದುಪಡಿಸಲಾಗಿದೆ. ಉಳಿದ ಎಲ್ಲಾ ರೀತಿಯಿಂದಲೂ ನ್ಯಾಯಾಧಿಕರಣವು ಹೊರಡಿಸಿದ ತೀರ್ಪು ಮತ್ತು ಐತೀರ್ಪು ಹಸ್ತಕ್ಷೇಪವಿಲ್ಲದೆ ಪರಿಣಾಮಕಾರಿಯಾಗಿ ಉಳಿಯುತ್ತದೆ.

ತತ್ಪರಿಣಾಮವಾಗಿ, ಮೇಲ್ಮನವಿಯನ್ನು ಮೇಲೆ ತಿಳಿಸಿದಷ್ಟು ಮಟ್ಟಿಗೆ ಪುರಸ್ಕರಿಸಲಾಗಿದೆ. ಮಾಲೀಕರು/ಇಲ್ಲಿನ 4ನೇ ಎದುರುದಾರನು ಐತೀರ್ಪನ್ನು ಪಾಲಿಸತಕ್ಕದ್ದು.

ಠೇವಣಿಯಿಟ್ಟಿರುವ ಮೊತ್ತವನ್ನು ಬಟವಾಡೆಗಾಗಿ ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಧಿಕರಣಕ್ಕೆ ವರ್ಗಾಯಿಸತಕ್ಕದ್ದು.

---